# ಕರ್ನಾಟಕ ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಪೂರಕ ಅಧಿನಿಯಮ, 1961

(ಕರ್ನಾಟಕ ರಾಜ್ಯಪತ್ರ, ಗುರುವಾರ, ಸೆಪ್ಟೆಂಬರ್, 30, 2004 ಭಾಗ–4ಎ ಪುಟ 409 ರಿಂದ 410ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

2. ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ತಿದ್ದುಪಡಿ ಅಧಿನಿಯಮ, 1960ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವುದು

3. 1960ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 6 ರ ನಿರಸನ


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1961ರ ಅಧಿನಿಯಮ 3.–** ಭಾರತ ಸರ್ಕಾರವು 1951ನೇ ಇಸವಿಯಲ್ಲಿ ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಅಧಿನಿಯಮ ಎಂಬ ಒಂದು ಕಾನೂನನ್ನು ಜಾರಿಗೆ ತಂದಿತು. ಈ ಅಧಿನಿಯಮದ ಉಪಬಂಧಗಳು, ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 18 ಮತ್ತು 30ನೇ ನಮೂದುಗಳ ಉಪಬಂಧಗಳಿಗೆ ಅನ್ವಯಿಸುವಂತೆ ತೋರುವುದರಿಂದಾಗಿ ಭಾರತ ಸರ್ಕಾರದ ಸಲಹೆಯ ಮೇರೆಗೆ, ಕೇಂದ್ರ ಅಧಿನಿಯಮವು ಏಳನೇ ಅನುಸೂಚಿಯ ಪಟ್ಟಿ II ರಲ್ಲಿ ನಿರೂಪಿಸಲಾದ ಯಾವುದೇ ವಿಷಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಅದು ರಾಜ್ಯ ವಿಧಾನ ಮಂಡಲದಿಂದ ಅನುಮೋದಿತವಾದಂತೆ ಮಾನ್ಯವಾಗತಕ್ಕದ್ದು ಮತ್ತು ಬಂಧನಕಾರಿಯಾಗಿರತಕ್ಕದ್ದು ಎಂದು ಘೋಷಿಸುವ ಪೂರಕ ಕಾನೂನುಗಳನ್ನು ಭಾರತ ರಾಜ್ಯಗಳ ವಿಧಾನ ಮಂಡಲಗಳು ಜಾರಿಗೊಳಿಸಿದವು.

2. ನಿರ್ವಾಸಿತರ ಹಿತಾಸಕ್ತಿಯನ್ನು ಸಂಯುಕ್ತ ಸ್ವತ್ತುಗಳಿಂದ ಪ್ರತ್ಯೇಕಗೊಳಿಸುವುದಕ್ಕಾಗಿ ಅರ್ಜಿಗಳನ್ನು ದಾಖಲ್ಮಾಡುವುದಕ್ಕೆ ಸಂಬಂಧಿಸಿದಂತೆ ಒಂದು ಕಾಲಮಿತಿಯನ್ನು ನಿಗದಿಗೊಳಿಸುವ ಉದ್ದೇಶಕ್ಕಾಗಿ, ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಅಧಿನಿಯಮ, 1951ರ 6ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ತಿದ್ದುಪಡಿ ಅಧಿನಿಯಮ, 1960ನ್ನು ಸಂಸತ್ತು ಜಾರಿ ಮಾಡಿತು.

3. ಕೆಲವು ಕ್ಲೇಮುಗಳು ರಾಜ್ಯ ಪಟ್ಟಿಯಲ್ಲಿನ (ಪಟ್ಟಿ II) ವಿಷಯಗಳಿಗೆ ಸಂಬಂಧಿಸಿರಬಹುದಾಗಿದ್ದರಿಂದ ಮತ್ತು ರಾಜ್ಯ ಪಟ್ಟಿಯಲ್ಲಿನ ವಿಷಯಗಳಿಗೆ ಅವು ಸಂಬಂಧಿಸಿರುವಷ್ಟರ ಮಟ್ಟಿಗೆ ರಾಜ್ಯದಲ್ಲಿ ತಿದ್ದುಪಡಿಗಳನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ, ಪೂರಕ ಕಾನೂನನ್ನು ರಾಜ್ಯ ವಿಧಾನ ಮಂಡಲವು ಅಧಿನಿಯಮಿತ ಗೊಳಿಸಬಹುದೆಂದು ಭಾರತ ಸರ್ಕಾರವು ಸಲಹೆ ನೀಡಿತು. ವಿಧಾನ ಮಂಡಲವು ಅಧಿವೇಶನದಲ್ಲಿಲ್ಲದಿದ್ದುದರಿಂದಾಗಿ ಒಂದು ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು. ಅಧ್ಯಾದೇಶದ ಬದಲಿಗೆ ಈ ಅಧಿನಿಯಮವನ್ನು ಮಂಡಿಸಲಾಗಿದೆ.

(ಎಲ್ಎಡಬ್ಲ್ಯೂ 11 ಎಲ್ಜಿಎನ್ 61 ರಿಂದ ಪಡೆಯಲಾಗಿದೆ).

* * * *

# [1][ಕರ್ನಾಟಕ ಅಧಿನಿಯಮ][1] 1961ರ ಸಂಖ್ಯೆ 3

(1961ನೇ ಏಪ್ರಿಲ್ ಆರನೆಯ ದಿನಾಂಕದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟವಾಗಿದೆ)

## [1][ಕರ್ನಾಟಕ][1] ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಪೂರಕ ಅಧಿನಿಯಮ, 1961

(1961ರ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

**[1][ಕರ್ನಾಟಕ ರಾಜ್ಯ][1] ಕ್ಕೆ ಅನ್ವಯವಾಗುವಂತೆ ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಅಧಿನಿಯಮ, 1951ರ ಕೆಲವು ಉಪಬಂಧಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.**

[1][ಕರ್ನಾಟಕ ರಾಜ್ಯ][1] ಕ್ಕೆ ಅನ್ವಯವಾಗುವಂತೆ ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಅಧಿನಿಯಮ, 1951ರ (1951ರ ಕೇಂದ್ರಾಧಿನಿಯಮ LXIV) ಕೆಲವು ಉಪಬಂಧಗಳನ್ನು ಸೇರಿಸುವುದು ವಿಹಿತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದೆ ಹೇಳಿದಂತೆ ಅಧಿನಿಯಮಿತವಾಗತಕ್ಕದ್ದು:-

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಪೂರಕ ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗುತ್ತದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು 1960ನೇ ಅಕ್ಟೋಬರ್ 15ನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ತಿದ್ದುಪಡಿ ಅಧಿನಿಯಮ, 1960ನ್ನು [1][ಕರ್ನಾಟಕ ರಾಜ್ಯ] ಕ್ಕೆ ಅನ್ವಯಿಸುವುದು.–** ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ತಿದ್ದುಪಡಿ ಅಧಿನಿಯಮ, 1960ರ (1960ರ ಕೇಂದ್ರಾಧಿನಿಯಮ 27) ಮೂಲಕ ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಅಧಿನಿಯಮ, 1951ಕ್ಕೆ (1951ರ ಕೇಂದ್ರಾಧಿನಿಯಮ LXIV) ಮಾಡಲಾದ ತಿದ್ದುಪಡಿಗಳು ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರಲ್ಲಿ ನಿರೂಪಿಸಲಾದ ಯಾವುದೇ ವಿಷಯಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಅದರಲ್ಲಿ ಒಳಗೊಂಡಿರುವ ಉಪಬಂಧಗಳನ್ನು ರಾಜ್ಯ ವಿಧಾನ ಮಂಡಲದಿಂದ ಅಧಿನಿಯಮಿತಿಗೊಳಿಸಿದ್ದರೆ ಹೇಗೋ ಹಾಗೆ [1][ಕರ್ನಾಟಕ ರಾಜ್ಯ][1] ದಲ್ಲಿ ಸಿಂಧುವಾಗಿರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**3. 1960ರ [1][ಕರ್ನಾಟಕ][1] ಅಧ್ಯಾದೇಶ ಸಂಖ್ಯೆ 6ರ ನಿರಸನ.-** [1][ಕರ್ನಾಟಕ][1] ನಿರ್ವಾಸಿತರ ಹಿತಾಸಕ್ತಿ (ಪ್ರತ್ಯೇಕೀಕರಣ) ಪೂರಕ ಅಧ್ಯಾದೇಶ, 1960ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

* * * *

The above translation of the Karnataka Evacuee Interest (Separation) Supplementary Act, 1961 (3 of 1961) shall be the authoritative text in the Kannada Language under section 5A of the Karnataka Official Language Act, 1963 (Karnataka Act 26 of 1963)

**GOVERNOR OF KARNATAKA**

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ದಕ್ಷಿಣಾಮೂರ್ತಿ)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

RKB